# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

**ಸಿ. ಸಿ. ನಂ. 996/2023**

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ನಾಗಪ್ಪ | ಸಿಡಬ್ಲ್ಯೂ-01 | ಪಿಡಬ್ಲ್ಯೂ-01 |
| ತಂದೆಯ/ಗಂಡನ ಹೆಸರು | ಮಹದೇವಪ್ಪ | | |
| ವಯಸ್ಸು | 32 ವರ್ಷ | | |
| ಉದ್ಯೋಗ | ಒಕ್ಕಲುತನ | | |
| ವಾಸ ಸ್ಥಳ | ತೆಲಕೂರು | | |

ದಿನಾಂಕ : 05-09-2024

ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ

ಆರೋಪಿ ಪರಿಚಯ ಇದೆ. ಚಾ ಸಾ 2 ನನ್ನ ಕಾಕನ ಮಗ. ಚಾ ಸಾ 3 ನನ್ನ ದೊಡ್ಡಮ್ಮ. ಚಾ ಸಾ 4, 5, 7, 8, 9,10 ರವರ ಪರಿಚಯ ಇದೆ. ಚಾ ಸಾ 11 ನನ್ನ ತಮ್ಮ. ಮೃತ ಗುರುಬಾಯಿ ನನ್ನ ತಾಯಿ. ನನ್ನ ತಾಯಿ ಅಪಘಾತದಿಂದ ತೀರಿಹೋಗಿದ್ದಾರೆ. ದಿ.26-04-2023 ರಂದು ಅಪಘಾತ ಆಗಿದೆ. ಹೇಗೆ ಆಯಿತು , ಯಾರಿಂದ ತಪ್ಪಾಗಿ ಅಪಘಾತ ಆಗಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿ ನನಗೆ ದೂರವಾಣಿಯ ಮುಖಾಂತ ಕರೆ ಮಾಡಿ ಅಪಘಾತ ಆಗಿದೆ ಎಂದು ತಿಳಿಸಿರುತ್ತಾರೆ. ಪೋಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಸಾಕ್ಷಿಯ ಹೇಳಿಕೆಯ ಪಿರ್ಯಾದು ಆಗಿದ್ದು ಸದರಿ ದಾಖಲೆಯನ್ನು ನಿ ಪಿ 1 ಮತ್ತು ದಾಖಲೆಯ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದರ ಮೇರೆಗೆ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಯಾರ ನಿರ್ಲಕ್ಷದಿಂದ ಅಪಘಾತ ಆಗಿದೆ ಎಂದು ನನಗೆ ಗೊತ್ತಿಲ್ಲ. ವಾಹನದ ಸಂಖ್ಯೆ ಹೇಳಲು ಬರುವುದಿಲ್ಲ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಭಾವ ಚಿತ್ರ ವಾಗಿದ್ದು ಸದರಿ ದಾಖಲೆಯನ್ನು ನಿ ಪಿ 2 ಎಂದು ಗುರುತಿಸಲಾಯಿತು, ಸಾಕ್ಷಿಯು ನನ್ನ ತಾಯಿಯ ಶವ ಪಂಚನಾಮ ಕಾಲಕ್ಕೆ ತೆಗೆದ ಕಾಲಕ್ಕೆತೆಗೆದ ಪೊಟೋ ಎಂದು ತಿಳಿಸಿರುತ್ತಾರೆ.

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಗುನ್ನಾ ಸ್ಥಳ ಪಂಚನಾಮೆಕಾಲಕ್ಕೆ ತೆಗೆದ ಭಾವಚಿತ್ರ ವಾಗಿದ್ದು ಭಾವಚಿತ್ರ ವನ್ನು ಸಾಕ್ಷಿಯು ನೋಡಿ ಸ್ಥಳ ಪಂಚನಾಮೆಯನ್ನು ಮಾಡುವ ಕಾಲಕ್ಕೆ ತೆಗೆದಿದ್ದು ಎಂದು ತಿಳಿಸಿರುತ್ತಾಸರೆ. ಸದರಿ ದಾಖಲೆಯನ್ನು ನಿ

ಪಿ 3 ಎಂದು ಗುರುತಿಸಲಾಯಿತು. ಸದರಿ ಪ್ರಕರಣದ ಬಗ್ಗೆ ನನಗೆಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿ.08-06-2023 ರಂದು ಬಿಜನಳ್ಳಿ ಗ್ರಾಮದಲ್ಲಿ ನನ್ನ ದೊಡ್ಡಮ್ಮರವರ ಮನೆ ಶಾಂತಿ ಇದ್ದ ಕಾರಣ ನನ್ನ ತಮ್ಮ ಸಂಗಪ್ಪ ನನ್ನ ತಾಯಿ ಗುರುಬಾಯಿ ಇಬ್ಬರು ಮೊಟಾರು ಸೈಕಲ್ ಸಂಖ್ಯೆ ಕೆ ಎ 32 ಇ ಎಂ 7308 ನೇದ್ದರ ಮೇಲೆ ಹಾಗೂ ನಮ್ಮ ಸಂಬಂದಿಕರಾದ ಶಿವಹಬ್ಬು ಮತ್ತು ಚಾ ಸಾ 9 ರವರು ತಮ್ಮ ಮೊಟಾರು ಸೈಕಲ್ ಮೇಲೆ ಮಧ್ಯಾಹ್ನ 12.00 ಗಂಟೆ ಸುಮಾರಿಗೆ ಮನೆಯಿಂದ ಹೋದರು ಎಂದರೆ ಸರಿ. ಸಂಜೆ 05.30 ಕ್ಕೆ ನಮ್ಮಾರ ಶಿವ ಕರೆ ಮಾಡಿ ನಿಮ್ಮ ತಾಯಿ ಮತ್ತು ತಮ್ಮ ಕುಳಿತುಕೊಂಡು ಬರುತ್ತಿದ್ದ ಮೋಟಾರು ಸೈಕಲ್ ನಂ. ಕೆ ಎ 32 ಇ ಎಂ 7308 ನೇದ್ದ ಮಳಖೇಡ ಹತ್ತಿರ ಅಪಘಾತವಾಗಿದೆ ನಿಮ್ಮ ತಾಯಿ ಸೀರಿಯಸ್ ಇದ್ದು ಕಲಬುರಗಿ ಜಿಮ್ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಿದ್ದೇವೆ ನೀನು ಬಾ ಅಂತ ತಿಳಿಸಿರುತ್ತಾರೆ ಎಂದರೆ ಸರಿ. ಆಗ ನಾನು ಮತ್ತು ಚಾ ಸಾ 8 ರವರು ಕೂಡಿಕೊಂಡು ಕಲಬುರಗಿಯ ಜಿಮ್ ಆಸ್ಪತ್ರೆಗೆ ರಾತ್ರಿ 08-00 ಗಂಟೆ ಸುಮಾರಿಗೆ ಹೋಗಿ ನೋಡಲಾಗಿ ನನ್ನ ತಾಯಿಯ ತಲೆಯ ಬಲ ಮೆಲಕಿಗೆ ಭಾರಿ ಗುಪ್ತಗಾಯವಾಗಿ ಬಲಗಣ್ಣಿನ ಹತ್ತಿರ ತರಚಿದ ಗಾಯ ಹಾಗೂ, ಎಡಗೈ ಮುಂಗೈ ತರಚಿದ ಗಾಯಗಳಾಗಿದ್ದು ನನ್ನ ತಾಯಿ ಮಾತನಾಡಿಸಿದರು ಮಾತನಾಡಲಿಲ್ಲ ಎಂದರೆ ಸರಿಯಲ್ಲ. ಆಗ ಆಸ್ಪತ್ರೆಯಲ್ಲಿದ್ದ ಶಿವ ಈತನಿಗೆ ವಿಚಾರಿಸಿದಾಗ ಆತ ತಿಳಿಸಿದ್ದೇನೆಂದರೆ ಆತ ಮತ್ತು ಚಾ ಸಾ 9 ಇಬ್ಬರೂ ತುಮ್ಮ ಮೊಟಾರು ಸೈಕಲ್ ನೇದ್ದರ ಮೇಲೆ ಹಾಗೂ ನಿನ್ನ ತಮ್ಮ ಮತ್ತುನಿಮ್ಮತಾಯಿ ನಿನ್ನ ಮೋಟಾರು ಸೈಕಲ್ ಮೇಲೆ ಬೀಚನಳ್ಳಿಗ್ರಾವದಿಂದ ಮರಳಿ ತೆಲಕೂರು ಗ್ರಾಮಕ್ಕೆ ನಿನ್ನ ತಮ್ಮನ ಮೋಟಾರು ಸೈಕಲ್ ಹಿಂದೆ ತೆಲಕೂರು ಗ್ರಾಮಕ್ಕೆ ಮಳಖೇಡ ಮಾರ್ಗವಾಗಿ ಬರುವಾಗ ನಿನ್ನ ತಮ್ಮನು ತನ್ನ ವಶದಲ್ಲಿದ್ದ ಮೋಟಾರು ಸೈಕಲ್ಲ ನ್ನು ಅತಿವೇಗ ಮತ್ತು ನಿಶ್ಕಾಳಜಿಯಿಂದ ಚಲಾಯಿಸಿಕೊಂಡುಬರುತ್ತಿದ್ದ ಎಂದರೆ ಸರಿಯಲ್ಲ. ಹಾಗೆ ಬರುವಾಗ ಮಳಖೇಡ್ ದಾಟಿ ಸ್ವಲ್ಪ ಮುಂದುಗಡೆ ಬರುವಾಗ ಮೋದಿ ಪಂಕ್ಷನ್‌ನಡೆದ ಸ್ಥಳದಲ್ಲಿ ನಿನ್ನ ತಮ್ಮ ತನ್ನ ಮೊಟಾರು ಸೈಕಲ್ ನೇದ್ದರ ಮೇಲೆ ನಿಯಂತ್ರಣ ಕಳೆದುಕೊಂಡು ರಭಸದಿಂದ ನಿನ್ನ ತಾಯಿಯ ಸಮೀಪ ಕೆಳಗೆ ಬಿದ್ದರು ಎಂದರೆ ಸರಿಯಲ್ಲ.

ಆಗ ನಾವು ನಮ್ಮ ಮೊಟಾರು ಸೈಕಲನ್ನು ನಿಲ್ಲಿಸಿ ತಮ್ಮನ ಮೊಟಾರು ಸೈಕಲ್ ಹತ್ತಿರ ನೋಡಲಾಗಿ ನಿನ್ನ ತಾಯಿಗೆ ಬಲಮೆಲುಕಿಗೆ ಭಾರಿ ಗುಪ್ತಗಾಯವಾಗಿ ಬಲಗಣ್ಣಿನ ಹತ್ತಿರ ತರಚಿದ ರಕ್ತಗಾಯ ಹಾಗೂ ಎಡಗೈ ಮುಂಗೈಗೆ ತರಚಿದ ಗಾಯವಾಗಿತ್ತು ಎಂರದೆ ಸರಿಯಲ್ಲ. ನನ್ನ ತಮ್ಮನಿಗೆ

ಯಾವುದೇ ಗಾಯ ಆಗಿರಲಿಲ್ಲ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ.ನನ್ನ ತಾಯಿ ಮಾರ್ಚೆ ಹೋಗಿದ್ದು ಆಂಬ್ಯೂಲೆನ್ಸ್ ನಲ್ಲಿ ಜಿಮ್ಸ್ ಆಸ್ಪತ್ರೆಗೆಕರೆದುಕೊಂಡು ಹೋಗಿ ಸೇರಿಸಿದ್ದನ್ನು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಿ. 24-06-2023 ರಂದು ನಾನು ಪೋಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ಹೇಳಿಕೆ ಪಿರ್ಯಾದನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಸೀರಿಯಸ್ ಇದ್ದ ಕಾರಣ ಆಸ್ಪತ್ರೆಯಲ್ಲಿ ಇದ್ದೆ ಹಾಗಾಗಿ ಅಪಘಾತ ನಡೆದ ತಕ್ಷಣ ದೂರು ಕೊಡಲಾಗಿರಲಿಲ್ಲ ಎಂದು ಹೇಳಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಶ್ರೀ ಎಸ್ ಆರ್ ಪಿ ವಕೀಲರಿಂದಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)     ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ ದಂ.ಸೇಡಂ.

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

**ಸಿ. ಸಿ. ನಂ. 996/2023**

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಬಸವರಾಜು | ಸಿಡಬ್ಲ್ಯೂ-04 | ಪಿಡಬ್ಲ್ಯೂ-02 |
| ತಂದೆಯ/ಗಂಡನ ಹೆಸರು | ಶರಣಪ್ಪ | | |
| ವಯಸ್ಸು | 53 ವರ್ಷ | | |
| ಉದ್ಯೋಗ | ಒಕ್ಕಲುತನ | | |
| ವಾಸ ಸ್ಥಳ | ತೆಲಕೂರು | | |

ದಿನಾಂಕ : 05-09-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾ ಸಾ 1,2,3,5,8,9,10,11 ರವರ ಪರಿಚಯ ಇದೆ. ಆರೋಪಿ ಪರಿಚಯ ಇದೆ. ಮೃತ ಗುರುಬಾಯಿರವರ ಪರಿಚಯ ಇದೆ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ಸದರಿ ದಾಖಲೆಯನ್ನು ನಿ ಪಿ 3 ಮತ್ತು ದಾಖಲೆಯ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದರ ಮೇರೆಗೆ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಪಂಚನಾಮೆಎಂದು ತಿಳಿಸಿ ಪೋಲೀಸ್ ಠಾಣೆಯಲ್ಲಿ ಸಹಿ ತೆಗೆದುಕೊಂಡಿರುತ್ತಾರೆ. ಆದರೆ ದಾಖಲೆಯಲೆಯಲ್ಲಿರುವ ಮಾಹಿತಿಗಳು ನನಗೆ ಏನೂ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಸ್ಥಳ ಪಂಚನಾಮೆಯನ್ನು ಜರುಗಿಸಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆಯಾವುದೇ ಮಾಹಿತಿ ಇಲ್ಲ. ಸದರಿ ದಾಖಲೆಯ ಮೇಲೆ ಯಾವತ್ತು ಸಹಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಭಾವ ಚಿತ್ರವನ್ನು ತೋರಿಸಿ ಸದರಿ ದಾಖಲೆಯು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿ ಸದರಿ ಭಾವ ಚಿತ್ರವನ್ನು ಯಾಕೆ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಪೋಲೀಸರ ಕೋರಿಕೆಯ ಮೇರೆಗೆ ನಿಂತಿರುತ್ತೇನೆ ಎಂದು ನುಡಿಯುತ್ತಾರೆ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿ.25-06-2023 ರಂದು ಬೆಳಿಗ್ಗೆ ಸುಮಾರು 10-00 ರಿಂದ 11-00 ಗಂಟೆಯ ವರೆಗೆ ಪೋಲೀಸರು ಚಾ ಸಾ 1 ರವರು ತೋರಿಸಿದ ಜಾಗದಲ್ಲಿ ನನ್ನ ಮತ್ತು ಚಾ ಸಾ 5 ರವರ

ಸಮಕ್ಷಮ ಸೇಡಂ ಮಳಖೇಡ್ ರಸ್ತೆಯ ಮೇಲೆ ಅಪಘಾತ ಆಗಿದ್ದರ ಮೇರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ಪರಿಚಯ ಇರುವ ಕಾರಣ ಆತನ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಬಗ್ಗೆ ಮಾಹಿತಿ ಇದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಶ್ರೀ ಎಸ್ ಆರ್ ಪಿ ವಕೀಲರಿಂದಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ ದಂ.ಸೇಡಂ.

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

**ಸಿ. ಸಿ. ನಂ. 996/2023**

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಯಲ್ಲಾಲಿಂಗ | ಸಿಡಬ್ಲ್ಯೂ-05 | ಪಿಡಬ್ಲ್ಯೂ-03 |
| ತಂದೆಯ/ಗಂಡನ ಹೆಸರು | ಶಿವಶರಣಪ್ಪ | | |
| ವಯಸ್ಸು | 33 ವರ್ಷ | | |
| ಉದ್ಯೋಗ | ಒಕ್ಕಲುತನ | | |
| ವಾಸ ಸ್ಥಳ | ತೆಲಕೂರು | | |

ದಿನಾಂಕ : 05-09-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾ ಸಾ 1 ನನ್ನ ಅಣ್ಣ. ಚಾ ಸಾ 2 ನನ್ನ ತಮ್ಮ . ಚಾ ಸಾ 7 ನನ್ನ ಅಕ್ಕ. ಚಾ ಸಾ 8,9 ರವರ ಪರಿಚಯ ಇದೆ. ಚಾ ಸಾ 11 ನನ್ನ ತಮ್ಮ . ಚಾ ಸಾ 10 ರವರ ಪರಿಚಯ ಇದೆ. ಮೃತ ಗುರುಬಾಯಿ ನನ್ನ ದೊಡ್ಡಮ್ಮ. ಆರೋಪಿಯ ನನ್ನ ತಮ್ಮ.

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ಸದರಿ ದಾಖಲೆಯು ಈಗಾಗಲೆ ನಿ ಪಿ 3 ಎಂದು ಗುರುತಿಸಲಾಗಿದೆ ಮತ್ತು ದಾಖಲೆಯ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದರ ಮೇರೆಗೆ ಸಹಿಯನ್ನು ನಿ ಪಿ 3(ಬಿ ) ಎಂದು ಗುರುತಿಸಲಾಯಿತು. ಪಂಚನಾಮೆಎಂದು ತಿಳಿಸಿ ಪೋಲೀಸ್ ಠಾಣೆಯಲ್ಲಿ ಸಹಿ ತೆಗೆದುಕೊಂಡಿರುತ್ತಾರೆ. ಆದರೆ ದಾಖಲೆಯಲೆಯಲ್ಲಿರುವ ಮಾಹಿತಿಗಳು ನನಗೆ ಏನೂ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಸ್ಥಳ ಪಂಚನಾಮೆಯನ್ನು ಜರುಗಿಸಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆಯಾವುದೇ ಮಾಹಿತಿ ಇಲ್ಲ. ಸದರಿ ದಾಖಲೆಯ ಮೇಲೆ ಯಾವತ್ತು ಸಹಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಭಾವ ಚಿತ್ರವನ್ನು ತೋರಿಸಿ ಸದರಿ ದಾಖಲೆಯು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿ ಸದರಿ ಭಾವ ಚಿತ್ರವನ್ನು ಯಾಕೆ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಪೋಲೀಸರ ಕೋರಿಕೆಯ ಮೇರೆಗೆ ನಿಂತಿರುತ್ತೇನೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿ.25-06-2023 ರಂದು ಬೆಳಿಗ್ಗೆ ಸುಮಾರು 10-00 ರಿಂದ 11-00 ಗಂಟೆಯ ವರೆಗೆ ಪೋಲೀಸರು ಚಾ ಸಾ 1 ರವರು ತೋರಿಸಿದ ಜಾಗದಲ್ಲಿ ನನ್ನ ಮತ್ತು ಚಾ ಸಾ 4 ರವರ ಸಮಕ್ಷಮ ಸೇಡಂ ಮಳಖೇಡ್ ರಸ್ತೆಯ ಮೇಲೆ ಅಪಘಾತ ಆಗಿದ್ದರ ಮೇರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ಪರಿಚಯ ಇರುವ ಕಾರಣ ಆತನ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಬಗ್ಗೆ ಮಾಹಿತಿ ಇದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಶ್ರೀ ಎಸ್ ಆರ್ ಪಿ ವಕೀಲರಿಂದಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ ದಂ.ಸೇಡಂ.

*Accused is present. CW-1,4,5 are examined as PW-1, 2,3 and got marked Ex. P-1 to 3. R/WS to CW-8 to 10 and 15. Call on 04-10-2024.*

*JMFC, Sedam.*

*Accused is present. CW-6 is examined as PW-1 and got marked Ex. P-1 to 3. R/WS to CW-1, 4, 5 and 7. call on 07-11-2024*

*JMFC, Sedam.*